Shri Sangameshwar Arts and Commerce college, Chadchan
NCC NEWS Papers Cuttings












ವಿಜಯಪುರ

ಚಡಚಣದ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜಯಪುರ ಕರ್ನಾಟಕ ಬಟಾಲಿಯನ್ ಆಡಳಿತ ಅಧಿಕಾರಿ ಮೇಜರ್ ಶೃತಿ ನಾಯರ್ ಮಾತನಾಡಿದರು.

## ಭಾರತೀಯ ಸೇನೆ ವಿಶ್ವದ ಎರಡನೇ ದೊಡ್ಡ ಸೈನ್ಯ

**ಚಡಚಣ :** ಭಾರತದ ಸೇನೆಯೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಲು, ಸಾರ್ವಭೌಮತ್ವವನ್ನು ಕಾಪಾಡಲು, ಪ್ರಾದೇಶಿಕ ಸಮಗ್ರತೆ ಮತ್ತು ರಾಷ್ಟ್ರದ ಐಕ್ಯತೆಯನ್ನು ಬಲಪಡಿಸಲು ಸನ್ನದ್ಧವಾಗಿದೆ ಎಂದು 36ನೇ ಬಟಾಲಿಯನ್ ಆಡಳಿತ ಅಧಿಕಾರಿ ಮೇಜರ್ ಶೃತಿ ನಾಯರ್ ಅಭಿಪ್ರಾಯಪಟ್ಟರು.

ಪಟ್ಟಣದ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ್ದ 'ಭಾರತೀಯ ಸೈನ್ಯದಲ್ಲಿ ಉದ್ಯೋಗಾವಕಾಶಗಳು' ಕುರಿತು ಅವರು ಮಾತನಾಡಿದರು.

ಆಕ್ರಮಣಕಾರಿ ಯುದ್ಧಗಳನ್ನು, ಆಂತರಿಕ ಬೆದರಿಕೆಗಳನ್ನು ಹಿಮ್ಮೆಟ್ಟಿಸುವಲ್ಲಿ ಭಾರತೀಯ ಶಸಸ್ತ ಪಡೆಗಳು ಸಮರ್ಥವಾಗಿವೆ. ಎನ್‌ಸಿಸಿಯ ಬಿ ಮತ್ತು ಸಿ ಸರ್ಟಿಫಿಕೆಟ್ ಪಡೆದ ಕೆಡೆಟಗಳಿಗೆ ಯುಪಿಎಸ್‌ಸಿ ನಡೆಸುವ ಸಿಡಿಎಸ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಹಾಗೂ ಸೈನಿಕ ಪಡೆಗಳ ನೇಮಕಾತಿಯಲ್ಲಿ 10 ರಿಂದ 15 ಕೃಪಾಂಕಗಳನ್ನು ನೀಡಿ ಬಿಎಸ್‌ಎಫ್. ಸಿಐಎಸ್‌ಎಫ್. ಸಿಆರ್‌ಸಿಎಫ್ ಹಾಗೂ ಎಸ್‌ಎಸ್‌ಬಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದರ ಸದುಪಯೋಗವನ್ನು ನಮ್ಮ ಕೆಡೆಟ್‌ಗಳು ಪಡೆದುಕೊಳ್ಳುವಂತೆ ಪ್ರೇರೇಪಿಸಿದರು.

ಮಹಾವಿದ್ಯಾಲಯದ ಎನ್‌ಸಿಸಿ ಘಟಕದ ಕಮಾಂಡರ್ ಲೆಫ್ಟಿನೆಂಟ್ ಡಾ.ಎಂ.ಎಸ್. ಮಾಗಣಗೇರಿ ಮಾತನಾಡಿ, ಬಿ ಮತ್ತು ಸಿ ಪ್ರಮಾಣಪತ್ರ ಪಡೆದ ಕೆಡೆಟ್‌ಗಳಿಗೆ ಭಾರತದ ಸೇನೆಯಲ್ಲಿ ವಿಫುಲ ಅವಕಾಶಗಳಿವೆ. ಒಗ್ಗಟ್ಟು, ಶಿಸ್ತು ಮತ್ತು ರಾಷ್ಟ್ರಪ್ರೇಮ ರೂಢಿಸಿಕೊಳ್ಳುವ ಕೆಡೆಟ್‌ಗಳಿಗೆ ಭಾರತೀಯ ಸೇನೆ ಸೇರಲು ಸಹಾಯ ಮಾಡುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಎಸ್.ಎಸ್. ಚೋರಗಿ ವಹಿಸಿದ್ದರು, ಡಾ.ಎಸ್.ಎಸ್. ದೇಸಾಯಿ, ಡಾ. ಕೆ.ಎಂ. ಮುರುಗೇಶ ಕಾರ್ಯಕ್ರಮ ನಿರ್ವಹಿಸಿದರು.



## ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿರಿ

**ಚಡಚಣ:** ಭಾರತ ಪೋಲಿಯೋ ಮುಕ್ತವಾಗಿದೆ. ಆದಾಗ್ಯೂ ಮುಂಜಾಗ್ರತದ ದೃಷ್ಟಿಯಿಂದ ಪೋಲಿಯೋ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಕಂಪನಿ ಕಮಾಂಡರ್ ಲೆಫ್ಟಿನೆಂಟ್ ಡಾ. ಎಂ.ಎಸ್. ಮಾಗಣಗೇರಿ ಹೇಳಿದರು. ಪಟ್ಟಣದ ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ ಪಲ್ಸ್ ಪೋಲಿಯೋ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು. ಚಡಚಣ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಾಜಶೇಖರ ಕೋಳೆಕಾರ ಮಾತನಾಡಿದರು. ಜಾಥಾದಲ್ಲಿ ಎನ್‌ಸಿ ಕೆಡೆಟ್‌ಗಳು ನಗರದ ಪ್ರಮುಖ ಬೀದಿಗಳಲ್ಲಿ ಪೋಲಿಯೋ ಜಾಗೃತಿ ಘೋಷಣೆ ಕೂಗುತ್ತ ಜನರಲ್ಲಿ ಜಾಗೃತಿ ಮೂಡಿಸಿದರು. ಜಾಥಾದಲ್ಲಿ ಸಂಜಯಕುಮಾರ ಅವಟಿ ಪ್ರಾಚಾರ್ಯರು, ಸಿಬ್ಬಂದಿ ವರ್ಗ ಇದ್ದರು.

ಕನ್ನಡಪ್ರಭ Wed, 03 Februa
https://kpepap



## 'ಭಾರತ ಪೋಲಿಯೊ ಮುಕ್ತ ರಾಷ್ಟ್ರ'

ಚಡಚಣ: ಭಾರತ ಪೋಲಿಯೊ ಮುಕ್ತವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಯಾವುದೇ ಪೋಲಿಯೊ ಪ್ರಕರಣಗಳು ವರದಿಯಾಗಿಲ್ಲ. ಅದಾಗ್ಯೂ ಮುಂಜಾಗ್ರತಾ ದೃಷ್ಟಿಯಿಂದ ದೇಶದಾದ್ಯಂತ ಪೋಲಿಯೊ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಕಂಪನಿ ಕಮಾಂಡರ್ ಲೆಫ್ಟಿನೆಂಟ್ ಡಾ.ಎಂ.ಎಸ್. ಮಾಗಣಗೇರಿ ಹೇಳಿದರು.

ಪಟ್ಟಣದ ಶ್ರೀಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಸೋಮವಾರ ಆಯೋಜಿಸಿದ್ದ ಪಲ್ಸ್ ಪೋಲಿಯೊ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು. 'ಬೇರೆ ದೇಶಗಳಲ್ಲಿ ಕಂಡುಬರುವಂತೆ ಪೋಲಿಯೊ ಪ್ರಕರಣಗಳು ನಮ್ಮ ದೇಶದಲ್ಲಿ ಇಲ್ಲ. ಇದನ್ನು ಗಮನಿಸಿದರೆ ಭಾರತವು ವೈದ್ಯಕೀಯ ರಂಗದಲ್ಲಿ ಮುಂದುವರಿದ ರಾಷ್ಟ್ರವಾಗಿದೆ' ಎಂದರು.

ಚಡಚಣ ಸಮೂದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಾಜಶೇಖರ ಕೊಳೆಕಾರ ಮಾತನಾಡಿದರು

ಪಲ್ಸ್ ಪೋಲಿಯೊ ಅಭಿಯಾನದ ಅಂಗವಾಗಿ ಎನ್‌ಸಿಸಿ ಕೆಡೆಟ್‌ಗಳು ನಗರದ ಪ್ರಮುಖ ಬೀದಿಗಳು, ಬಸ್‌ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಪೋಲಿಯೊ ಜಾಗೃತಿ ಘೋಷಣೆಗಳನ್ನು ಕೂಗುತ್ತ ಜನರಲ್ಲಿ ಅರಿವು ಮೂಡಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕ ಸಂಜಯಕುಮಾರ ಅವಟಿ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ಭಾಗವಹಿಸಿದ್ದರು.

# ಗುಡಿಯಷ್ಟೇ ಮಹತ್ವ ಗಡಿಗೂ ಇದೆ: ಚೋಪಡೆ

ಚಡಚಣ26: ಉತ್ತರ ಪ್ರದೇಶ ನಿರ್ದೇಶನಾಲಯದ ಜ್ಯೂನಿಯರ್ ವಿಭಾಗದ ಎನ್‌ಸಿಸಿಯ ಅತ್ಯುತ್ತಮ ಕೆಡೆಟ್ ಎಂದು ಪ್ರಶಸ್ತಿ ಪಡೆದ ಕ್ಯಾಪ್ಟನ್ ಮನೋಜ್ ಕುಮಾರ್ ಪಾಂಡೆ ಭಾರತೀಯ ಸೇನೆಯ ಅಧಿಕಾರಿಯಾಗಿದ್ದು, 1999ರ ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವರ ಧೈರ್ಯದಿಂದ ಹೋರಡಿ ಯುದ್ಧದಲ್ಲಿ ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ಅವರ ಸಮರ್ಥ ನಾಯಕತ್ವಕ್ಕಾಗಿ ಭಾರತದ ಅತ್ಯುನ್ನತ ಮಿಲಿಟರಿ ಗೌರವವಾದ ಪರಮವೀರ ಚಕ್ರವನ್ನು ಮರಣೋತ್ತರವಾಗಿ ನೀಡಲಾಯಿತು ಎಂದು ಶ್ರೀ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಎಸ್. ಬಿ. ಚೋಪಡೆ ಹೇಳಿದರು.

ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ 23ನೇ ಕಾರ್ಗಿಲ್ ವಿಜಯ ದಿವಸದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಅವರು ಭಾರತದಲ್ಲಿ ಗುಡಿ ಮತ್ತು ಗಡಿಗಳೆರಡೂ ಅಷ್ಟೇ ಮಹತ್ವ ಪಡೆದಿವೆ.

ಗುಡಿಗಳಲ್ಲಿರುವ ದೇವರುಗಳನ್ನು ಪೂಜಿಸುವಂತೆ ಗಡಿಯಲ್ಲಿರುವ ಸೈನಿಕರೂ ಪೂಜ್ಯನೀಯರೆ ಆಗಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಎನ್‌ಸಿಸಿ ಅಧಿಕಾರಿಗಳಾದ ಲೆಫ್ಟಿನೆಂಟ್ ಡಾ. ಎಂ. ಎಸ್. ಮಾಗಣಗೇರಿ ಮೂಲತಃ ಇಂಜನಿಯರಿಂಗ್ ವಿದ್ಯಾರ್ಥಿಯಾದ ಮನೋಜ್ ಕುಮಾರ್ ಪಾಂಡೆ ಭಾರತೀಯ ಸೇನೆಗೆ ಆಯ್ಕೆಯ ಮೊದಲು ಸೇವೆಗಳ ಆಯ್ಕೆ ಮಂಡಳಿ ಸಂದರ್ಶನದಲ್ಲಿ, ಸಂದರ್ಶಕರು ಅವರನ್ನು ಕೇಳಿದ "ನೀವು ಸೈನ್ಯಕ್ಕೆ ಏಕೆ ಸೇರಲು ಬಯಸುತ್ತೀರಿ?" ಎಂಬ ಪ್ರಶ್ನೆಗೆ "ನಾನು ಪರಮವೀರ ಚಕ್ರವನ್ನು ಪಡೆಯಲು ಬಯಸುತ್ತೇನೆ" ಎಂಬ ಉತ್ತರ ಅವರಲ್ಲಿದ್ದ ಆತ್ಮಸಾಕ್ಷಿಗೆ ನಿದರ್ಶನವಾಗಿದೆ. ಅದರಂತೆ ಕಾರ್ಗಿಲ್ ಯುದ್ಧದಲ್ಲಿ ತನ್ನ ಸೈನ್ಯಕ್ಕಿಂತ ಮುಂದೆ ಸಾಗಿಭುಜ ಮತ್ತು ಕಾಲಿಗೆ ಗಾಯವಾಗಿದ್ದರೂ ವೈರಿಗಳನ್ನು ಸದೆಬಡಿದರು. ದ.ರಾ. ಬೇಂದ್ರೆಯವರ "ಸಾವಿಗೆ ನಾನು ಹೆದರುವುದಿಲ್ಲ ಏಕೆಂದರೆ ಅದು ಬಂದಾಗ ನಾನು ಇರುವುದಿಲ್ಲ, ನಾನಿರುವವರೆಗೆ ಅದು ಬರುವುದಿಲ್ಲ" ಎಂಬ ಮಾತಿನಂತೆ ಮನೋಜ್ ಕುಮಾರ್ ಪಾಂಡೆ ಕೂಡಾ "ನನ್ನ ರಕ್ತವನ್ನು ಸಾಬೀತುಪಡಿಸುವ ಮೊದಲು ಸಾವು ಸಂಭವಿಸಿದರೆ, ನಾನು ಭರವಸೆ ನೀಡುತ್ತೇನೆ ನಾನು ಸಾವನ್ನು ಕೊಲ್ಲುತ್ತೇನೆ!" ಎಂಬ ಅವರ ದಿನಚರಿಯ ಸಾಲುಗಳನ್ನು ನೆನಪಿಸಿಕೊಂಡರು.

ವಿಶ್ರಾಂತ ಪ್ರಾಚಾರ್ಯರಾದ ಡಾ. ಎಸ್. ಎಸ್. ಚೋರಗಿ ಮಾತನಾಡಿ ಮನೋಜ್ ಕುಮಾರ್ ಪಾಂಡೆಯವರಂತೆ ಪ್ರತಿಯೊಬ್ಬ ಭಾರತೀಯನಲ್ಲೂ ದೇಶ ಭಕ್ತಿ ಉಕ್ಕಿ ಹರಿಯಬೇಕಾಗಿದೆ. ಅಂದಾಗ ಮಾತ್ರ ಭಾರತಾಂಬೆಯ ಹೆಮ್ಮೆಯ ಪುತ್ರರಾಗಲು ಸಾಧ್ಯವೆಂದು ಎನ್‌ಸಿಸಿ ಕೆಡೆಟುಗಳು ಶಿಸ್ತು, ಸಂಯಮ ದೇಶಪ್ರೇಮ ತಮ್ಮ ಜೀವನದುದ್ದಕ್ಕೂ ರೂಢಿಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಡಾ.ಎಸ್.ಬಿ.ರಾಠೋಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಭಾರತದ ಪ್ರತಿಬ್ಬ ತಾಯಿಯೂ ತನ್ನ ಮಕ್ಕಳನ್ನು ಭಾರತಾಂಬೆಯ ಸೇವೆಗಾಗಿ ಸನ್ನದ್ಧಗೊಳಿಸುತ್ತಿದ್ದಾರೆ. ಮನೋಜ್ ಕುಮಾರ್ ಪಾಂಡೆಯವರ ಪಾರ್ಥಿವ ಶರೀರದ ಮುಂದೆ ರೋಧಿಸುತ್ತಾ ನನ್ನ ಹೊಟ್ಟೆಯಿಂದ ಇನ್ನೊಬ್ಬ ಮಗನನ್ನು ಈ ದೇಶಕ್ಕಾಗಿ ಕೊಡಲಾಗಲಿಲ್ಲವೆಂದು ತನ್ನ ಒಡಲನ್ನೇ ಹಳಿದುಕೊಂಡ ಘಟನೆಯನ್ನು ನೆನಪಿಸಿಕೊಟ್ಟರು. ಈಕಾರ್ಯಕ್ರಮದಲ್ಲಿ ಸಂಗಮೇಶ್ವರ ಪ್ರೌಢ ಶಾಲೆಯ ಎನ್‌ಸಿಸಿ ಅಧಿಕಾರಿಗಳಾದ ಎಂ. ಆಯ್ ಅಮರಖೇಡ, ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎಸ್.ಎಸ್. ದೇಸಾಯಿ ಡಾ. ಮುರುಗೇಶ, ಬಸವರಾಜ ಯಳ್ಳೂರು ಮಹಾಂತೇಶ ಜನವಾಡ, ಎನ್‌ಸಿಸಿ ಕೆಡೆಟುಗಳು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕೆಡೆಟ್ ಆನಂದ ಪ್ರಾರ್ಥಿಸಿದರೆ, ಪ್ರೊ. ಅಲಗೊಂಡ ಪಾಟೀಲ ನಿರೂಪಿಸಿ ವಂದಿಸಿದರು.

# ಗುಡಿಯಷ್ಟೇ ಮಹತ್ವ ಗಡಿಗೂ ಇದೆ

ಚಡಚಣ : ಭಾರತದಲ್ಲಿ ಗುಡಿ ಮತ್ತು ಗಡಿ ಎರಡು ಅಷ್ಟೇ ಮಹತ್ವ ಪಡೆದಿವೆ. ಗುಡಿಗಳಲ್ಲಿರುವ ದೇವರುಗಳನ್ನು ಪೂಜಿಸುವಂತೆ ಗಡಿಯಲ್ಲಿರುವ ಸೈನಿಕರೂ ಪೂಜ್ಯನೀಯರೆ ಆಗಿದ್ದಾರೆ ಎಂದು ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಬಿ. ಚೋಪಡೆ ಹೇಳಿದರು.

ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ್ದ 23ನೇ ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಉತ್ತರ ಪ್ರದೇಶ ನಿರ್ದೇಶನಾಲಯದ ಜ್ಯೂನಿಯರ್ ವಿಭಾಗದ ಎನ್‌ಸಿಸಿಯ ಅತ್ಯುತ್ತಮ ಕೆಡೆಟ್ ಎಂದು ಪ್ರಶಸ್ತಿ ಪಡೆದ ಕ್ಯಾಪ್ಟನ್ ಮನೋಜಕುಮಾರ್ ಪಾಂಡೆ ಭಾರತೀಯ ಸೇನೆಯ ಅಧಿಕಾರಿಯಾಗಿದ್ದು, 1999ರ ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವರ ಧೈರ್ಯದಿಂದ ಹೋರಾಡಿ ಯುದ್ಧದಲ್ಲಿ ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ಅವರ ಸಮರ್ಥ ನಾಯಕತ್ವಕ್ಕಾಗಿ ಭಾರತದ ಅತ್ಯುನ್ನತ ಮಿಲಿಟರಿ ಗೌರವವಾದ ಪರಮವೀರ ಚಕ್ರವನ್ನು ಮರಣೋತ್ತರವಾಗಿ ನೀಡಲಾಯಿತು ಎಂದರು.

ವಿಶ್ರಾಂತ ಪ್ರಾಚಾರ್ಯ ಡಾ. ಎಸ್.ಎಸ್. ಚೋರಗಿ ಮಾತನಾಡಿ, ಮನೋಜಕುಮಾರ ಪಾಂಡೆಯವರಂತೆ ಪ್ರತಿಯೊಬ್ಬ ಭಾರತೀಯನಲ್ಲೂ ದೇಶ ಭಕ್ತಿ ಉಕ್ಕಿ ಹರಿಯಬೇಕಾಗಿದೆ. ಅಂದಾಗ ಮಾತ್ರ ಭಾರತಾಂಬೆಯ ಹೆಮ್ಮೆಯ ಪುತ್ರರಾಗಲು ಸಾಧ್ಯ. ಎನ್‌ಸಿಸಿ ಕೆಡೆಟುಗಳು ಶಿಸ್ತು, ಸಂಯಮ ದೇಶಪ್ರೇಮ ತಮ್ಮ ಜೀವನದುದ್ದಕ್ಕೂ ರೂಢಿಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಡಾ. ಎಸ್.ಬಿ. ರಾಠೋಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಗಮೇಶ್ವರ ಪ್ರೌಢ ಶಾಲೆಯ ಎನ್‌ಸಿಸಿ ಅಧಿಕಾರಿ ಎಂ.ಐ. ಅಮರಖೇಡ, ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎಸ್.ಎಸ್. ದೇಸಾಯಿ, ಡಾ. ಮುರುಗೇಶ, ಬಸವರಾಜ ಯಳ್ಳೂರು, ಮಹಾಂತೇಶ ಜನವಾಡ, ಎನ್‌ಸಿಸಿ ಕೆಡೆಟುಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

This document was created with the Win2PDF “Print to PDF” printer available at

https://www.win2pdf.com

This version of Win2PDF 10 is for evaluation and non-commercial use only.
Visit https://www.win2pdf.com/trial/ for a 30 day trial license.

This page will not be added after purchasing Win2PDF.

https://www.win2pdf.com/purchase/